ಸಾಕ್ಷಿಯನ್ನು ದಿಃ 03-03-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ.ಎಸ್ ಎಮ್ ಎಚ್ ವಕೀಲರಿಂದಃ (ಪ್ರತಿವಾದಿ ಪರವಾಗಿ)**

ವಾದಿ ನನ್ನ ಖಾಸಾ ಸಹೋದರ ಎಂದರೆ ಸರಿ. ಮುಖ್ಯವಿಚಾರಣೆಯನ್ನು ನಾನೆ ಹೇಳಿ ಬರೆಸಿದ್ದೆನೆ. ನಾನು ದಸ್ತು ಬರಹಗಾರ ಲೈಸನ್ಸ ಹೊಂದಿಲ್ಲ. ಆ ದಿನ ವಾದಿ, ನಾನು ಹಾಗೂ ಪಿಡಬ್ಲೂಃ 2 ಮತ್ತು 3 ನಾಲ್ಕು ಜನ ಸೇರಿ ಚಾಪಾ ಕಾಗದವನ್ನು ಗದಗ ತಹಶೀಲ್ದಾರ ಕಚೇರಿ ಆವರಣದಿಂದ ತಂದೆವು. ಅದು 100 ರೂಪಾಯಿ ಮುಖಬೆಲೆಯ ಚಾಪಾ ಕಾಗದ ಆಗಿತ್ತು. ಅದನ್ನು ಮನೆಯ ಖರೀದಿ ವಚನ ಪತ್ರ ಬರೆಯುವ ಸಲುವಾಗಿ ತಂದಿದ್ದೆವು. ಚಾಪಾ ಕಾಗದ ಖರೀದಿಸುವ ಉದ್ದೇಶ ಸೇಲ್ ದೀಡ್ ಎಂದು ಬರೆಯಲಾಗಿದೆ ಎಂದರೆ ಸರಿ. ಆ ದಿನ ಯಾವುದೇ ಖರೀದಿ ಪತ್ರ ಮಾಡಿಲ್ಲ ಆದರೆ ಖರೀದಿ ವಚನ ಪತ್ರ ಬರೆಯಲಾಯಿತು. ಪ್ರತಿವಾದಿ ದಾವಾ ಆಸ್ತಿ ಮಾರುವುದಾಗಿ ನನಗೆ ವೈಯಕ್ತಿಕವಾಗಿ ಹೇಳಿಲ್ಲ , ಆದರೆ ಸುರೇಶ ಕವಲೂರ ಇವರಿಗೆ ಹೇಳಿದ್ದರು. ಪ್ರತಿವಾದಿ ದಿಃ 18/04/2021 ಕ್ಕಿಂತ ಒಂದು ವಾರ ಮೊದಲು ಆಸ್ತಿ ಮಾರುವುದಾಗಿ ಸುರೇಶ ಕವಲೂರ ಇವರಿಗೆ ಹೇಳಿದ್ದರು. ಅದೆ ದಿನ ಸುರೇಶ ಕವಲೂರು ಇವರು ಪ್ರತಿವಾದಿ ಮನೆ ಮಾರುತ್ತಿರುವುದಾಗಿ ನಮಗೆ ಹೇಳಿದರು. ದಾವಾ ಆಸ್ತಿ ನಂ.1580 ಇದ್ದು ಚೆಕ್ಕುಬಂದಿ ಪೂರ್ವಕ್ಕೆಃ ಒಬ್ಬರು ಅಂಗನವಾಡಿ ಟೀಚರ್ ಮನೆ , ಪಶ್ಚಿಮಕ್ಕೆಃ ರಸ್ತೆ, ದಕ್ಷಿಣಕ್ಕೆಃ ಕುಲಕರ್ಣಿ ಇವರ ಖಾಲಿ ಜಾಗ, ಉತ್ತರಕ್ಕೆಃ ಕಾಳಪ್ಪ ಕವಲೂರು ಇವರ ಮನೆ ಇದೆ. ನಾನು ಹೇಳಿದ ಚೆಕ್ಕುಬಂದಿಯಲ್ಲಿ ದಾವಾ ಆಸ್ತಿ ಇಲ್ಲ ಎಂದರೆ ಸರಿಯಲ್ಲ.

ನಾವು ದಿಃ 18/04/2021 ರಂದು ಪ್ರತಿವಾದಿಯ ಮನೆಗೆ ಹೋಗಿದ್ದೆವು. ಆ ದಿನ ಚಾಪಾ ಕಾಗದ ತೆಗೆದುಕೊಂಡು ಹೋಗಿರಲಿಲ್ಲ. ಪ್ರತಿವಾದಿ ಮೊದಲು ಮನೆಗೆ ರೂ.8.5 ಲಕ್ಷ ಎಂದು ಹೇಳಿದ್ದು, ಮಾತುಕತೆಯ ನಂತರ ರೂ.7,35,000/- ಗಳಿಗೆ ವ್ಯವಹಾರ ಮುಗಿಯಿತು. ಮರುದಿನ ಅಂದರೆ ದಿಃ 19/04/2021 ರಂದು ಮಧ್ಯಾಹ್ನ 4-30 ರ ಸಮಯದಲ್ಲಿ ಚಾಪಾ ಕಾಗದ ಖರೀದಿಸಿದೆವು. ನಿಪಿಃ 1 ಖರೀದಿ ವಚನ ಪತ್ರವನ್ನು ಪ್ರತಿವಾದಿಯ ಮನೆಯಲ್ಲಿ ಬರೆಯಲಾಯಿತು. ಕಾಗದ ಬರೆಯುವಾಗ ಪ್ರತಿವಾದಿಯ ವಯಸ್ಸು ಕೇಳಿಲ್ಲ. ಏಕೆ ಕೇಳಲಿಲ್ಲ ಎಂದರೆ ಕೇಳುವ ಅವಶ್ಯಕತೆ ಇಲ್ಲ ಎಂದು ಅನಿಸಿದ್ದರಿಂದ ಕೇಳಿಲ್ಲ ಎಂದು ಹೇಳುತ್ತಾರೆ. ನಿಪಿಃ 1

ರಲ್ಲಿ ಖರೀದಿ ವಚನ ಪತ್ರ ಯಾರಿಗೆ ಬರೆದುಕೊಡುತ್ತಿದ್ದೇನೆಂದು ಬರೆದಿಲ್ಲ ಎಂದರೆ ಸರಿಯಲ್ಲ. ಖರೀದಿ ವಚನ ಪತ್ರ ಬರೆಯುವಾಗ ದಾವಾ ಆಸ್ತಿ ಉತಾರ ನೋಡಿದ್ದೇನೆ. ದಾವಾ ಮನೆ ನೋಡಿದ್ದೇನೆ. ಖರೀದಿ ವಚನ ಪತ್ರದಲ್ಲಿ ಮನೆಯ ವರ್ಣನೆ ಬರೆದಿಲ್ಲ ಎಂದರೆ ಇಮ್ಲಾ ಎಂದು ಬರೆದಿದೆ ಎಂದು ಹೇಳುತ್ತಾರೆ. ನಿಪಿಃ 2 ರಲ್ಲಿ ದಾವಾ ಆಸ್ತಿ ಚೆಕ್ಕುಬಂದಿ ಪೂರ್ವಕ್ಕೆಃ ನದಾಫ್ ಇವರ ಮನೆ , ಪಶ್ಚಿಮಕ್ಕೆಃ ರಸ್ತೆ, ದಕ್ಷಿಣಕ್ಕೆಃ ವಿರುಪಾಕ್ಷಯ್ಯ ಕುಲಕರ್ಣಿ ಇವರ ಮನೆ, ಉತ್ತರಕ್ಕೆ ವೀರಭದ್ರಪ್ಪ ಕವಲೂರ ಇವರ ಮನೆ ಎಂದು ಬರೆದಿದೆ ಎಂದರೆ ಸರಿ. ನಿಪಿಃ 1 ರಲ್ಲಿ ಬರೆದ ಚೆಕ್ಕುಬಂದಿ ಹಾಗೂ ನಿಪಿಃ 2 ರಲ್ಲಿ ಬರೆದ ಚೆಕ್ಕುಬಂದಿ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ನಿಪೀ 2 ರಲ್ಲಿ ಪ್ರತಿವಾದಿಯ ಹಣಕಾಸಿನ ಅಡಚಣೆ ಮತ್ತು ಅವಶ್ಯಕತೆ ಬಗ್ಗೆ ಬರೆದಿಲ್ಲ ಎಂದರೆ ಅವರು ಮನೆ ಮಾರುವುದು ಇದೆ ಎಂದು ಮಾತ್ರ ಹೇಳಿದ್ದರು ಎಂದು ಹೇಳುತ್ತಾರೆ. ಅದೆ ರೀತಿ ರೂ.7,35,000/- ಗಳಿಗೆ ಆಸ್ತಿಯನ್ನು ಮಾರಲು ಒಪ್ಪುವುದಾಗಿ ಬರೆದಿಲ್ಲ ಎಂದರೆ ಅಲ್ಲಿ ಏನು ಮಾತುಕತೆ ಆಗಿದೆ ಅದನ್ನು ನಾನು ಬರೆದಿದ್ದೇನೆಂದು ಹೇಳುತ್ತಾರೆ. ನಿಪಿಃ 1 ರಲ್ಲಿ ರೂ.7,35,000/- ಗಳಿಗೆ ಖರೀದಿ ಕೊಟ್ಟಿರುತ್ತೇನೆಂದು ಬರೆದಿದೆ ಎಂದರೆ ಸರಿ. ಯಾರು ಯಾರಿಗೆ ಖರೀದಿ ಕೊಟ್ಟಿದ್ದಾರೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ರೂ.2 ಲಕ್ಷ ಕೊಟ್ಟಿರುತ್ತಾರೆ ಎಂದು ಬರೆದಿದ್ದು ಯಾರು ಕೊಟ್ಟಿರುತ್ತಾರೆ ಎಂದು ಬರೆದಿಲ್ಲ ಎಂದರೆ ಸರಿ. ಪ್ರತಿವಾದಿಯ ಸಹಿ ಪಡೆಯುವ ಮೊದಲೆ ಅಂದರೆ ಕಾಗದ ಬರೆಯುವ ಮೊದಲೆ x ಮಾರ್ಕ ಹಾಕಲಾಗಿತ್ತು ಎಂದರೆ ಸರಿ. ಅದೆ ರೀತಿ ಖರೀದಿ ಮಾಡಿಕೊಳ್ಳುವವರ ಸಹಿ ಕೆಳಗೆ ಸಹ x ಮಾರ್ಕ ಹಾಕಲಾಗಿತ್ತು ಎಂದರೆ ಸರಿ. ದಾವಾ ಕಾಗದ ಬರೆಯುವ ದಿನ ವಾದಿ, ನಾನು, ಪಿಡಬ್ಲೂಃ 2 ಮತ್ತು 3, ಪ್ರತಿವಾದಿ ಮಾತ್ರ ಇದ್ದೆವು. ಸಾಕ್ಷಿದಾರರ ಸಹಿ ಜಾಗದಲ್ಲಿ 1,2,3, ಎಂದು ಹಾಕಿದ್ದು ಕೇವಲ ಇಬ್ಬರು ಸಾಕ್ಷಿದಾರರ ಸಹಿ ಇದೆ ಎಂದರೆ ಬೇರೆ ಯಾರಾದರೂ ಸಾಕ್ಷಿದಾರರು ಬಂದರೆ ಸಹಿ ಮಾಡಿಸಬಹುದು ಎಂದು ಬರೆಯಲಾಗಿತ್ತು ಎಂದು ಹೇಳುತ್ತಾರೆ. ನಿಪಿಃ 1 ನ್ನು ಎಲ್ಲಿ ಬರೆಯಲಾಯಿತು ಎಂದು ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಕಾಗದವನ್ನು ಪ್ರತಿವಾದಿಯ ಮನೆಯಲ್ಲಿ ಬರೆಯಲಾಗಿದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನೋಂದಣಿ ಏಕೆ ಮಾಡಿಸಲಿಲ್ಲ ಎಂಬ ಪ್ರಶ್ನೆಗೆ ಕಂಪ್ಯೂಟರ ಉತಾರ ಇಲ್ಲದ ಕಾರಣ ಮಾಡಿಸಿಲ್ಲ ಎಂದು ಹೇಳುತ್ತಾರೆ. ನಾನು ಕಾಗದ ಬರೆದಾಗ ಸಹಿ ಮಾಡಿಲ್ಲ ಆದರೆ ದಾವೆ ಮಾಡುವ ಸಮಯದಲ್ಲಿ ಮಾಡಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದಂತೆ ನಾವು ಯಾವ ಕಾಲಕ್ಕೂ ಪ್ರತಿವಾದಿಯ ಮನೆಗೆ ಹೋಗಿಲ್ಲ,

ಯಾವುದೇ ಖರೀದಿ ಮಾತುಕತೆ ಆಗಿಲ್ಲ, ಯಾವುದೇ ಖರೀದಿ ವಚನ ಪತ್ರ ಬರೆದಿಲ್ಲ, ವಾದಿ ಪ್ರತಿವಾದಿಗೆ ರೂ.2 ಲಕ್ಷ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಕಾಗದ ಬರೆದ ನಂತರ ಅದೆ ದಿನ ನೋಟರಿ ಮಾಡಿಸಲಾಯಿತು. ನೋಟರಿ ಮಾಡಿಸಲು ನಾನು, ವಾದಿ, ಪಿ ಡಬ್ಲೂ಼ 2 ಮತ್ತು 3 ನಾಲ್ಕು ಜನ ಹೋಗಿದ್ದೆವು. ಖರೀದಿ ವಚನ ಪತ್ರ ಮಾಡುವ ಮೊದಲು ಸಾರ್ವಜನಿಕ ನೋಟಿಸು ನೀಡುವಂತೆ ನಾನು ಹೇಳಿಲ್ಲ. 2021 ರಲ್ಲಿ ದಾವಾ ಆಸ್ತಿ ಸುಮಾರು ರೂ.8 ಲಕ್ಷದಿಂದ ರೂ.8.5 ಲಕ್ಷ ಬೆಲೆ ಬಾಳುತ್ತಿತ್ತು ಆದರೆಮಾತುಕತೆ ರೂ.7,35,000/- ಗಳಿಗೆ ಮುಗಿದಿದೆ. ಆ ಸಮಯದಲ್ಲಿ ದಾವಾ ಆಸ್ತಿ ಸುಮಾರು 30 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಅದೆ ಸಮಯದಲ್ಲಿ ವೀರಭದ್ರಪ್ಪ ಕವಲೂರ ಇವರು ತಮ್ಮ ಆಸ್ತಿಯನ್ನು ರೂ.29,00,000/-ಗಳಿಗೆ ಮಾರಿದ್ದಾರೆ ಎಂದರೆ ಸದರಿ ಆಸ್ತಿ ದಾವಾ ಆಸ್ತಿಯ 2 ಪಟ್ಟು ಇದೆ ಮತ್ತು ಅದು ರಸ್ತೆಗೆ ಇದೆ ಎಂದು ಹೇಳುತ್ತಾರೆ. ಆ ಆಸ್ತಿ ಈಗ ಒಂದುವರೆ ಎರಡು ವರ್ಷದ ಹಿಂದೆ ಖರೀದಿ ಆಗಿದೆ. ಪ್ರತಿವಾದಿ ವಾದಿಯಿಂದ ಕೈಗಡ ಸಾಲ ಪಡೆದಿದ್ದರು, ಅದರ ಭದ್ರತೆಗಾಗಿ ಖಾಲಿ ಚಾಪಾ ಕಾಗದದ ಮೇಲೆ ಪ್ರತಿವಾದಿಯ ಸಹಿ ಪಡೆದು ಖೊಟ್ಟಿ ಖರೀದಿ ವಚನ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಯಾವ ಕಾಲಕ್ಕೂ ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಲು ಒಪ್ಪಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಸಹೋದರನಾಗಿರುವುದರಿಂದ ಪ್ರತಿವಾದಿಯ ಆಸ್ತಿ ಎತ್ತಿ ಹಾಕಲು ವಾದಿ, ಪಿ ಡಬ್ಲೂ಼ 2 ಮತ್ತು 3 ಹಾಗೂ ನಾನು ಸೇರಿ ಖೊಟ್ಟಿ ಖರೀದಿ ವಚನ ಪತ್ರ ಸೃಷ್ಟಿ ಮಾಡಿ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ಼ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.